


ಎಡದಿಂದ ಬಲಕ್ಕೆ:

1. ಶತಪಥ ಹಾಕುತ್ತಿದೆ ನೋಡಿ 'ನೂರು ಕಾಲುಗಳ ಜೀವಿ' (4)
3. ಪ್ರತಿ ಹಳ್ಳಿಯ ಹೊರಗೆ ಇದೇನು ಶಿಬಿರ? (3)
4. ಈ ಎಲ್ಲ ವಸ್ತು ವಿವರಗಳಲ್ಲಿ ನೈಜವಾದದ್ದು ಏನು? (3)
6. ಒಡೆಯನ ಆಳಿನದೇ ಒಂದು ವಿಧದ ವರ್ತನೆ (4)
7. ಸಾಕಾಗಲಿಲ್ಲವೇ? ಎಲ್ಲವೂ ಇದೆಯಲ್ಲ (3)
9. ಜಪಕ್ಕೆ ಬಂದೊಡನೆ ಕಂಡದ್ದು ತಾವರೆ ಹೂವು (3)
11. ಪಾರಾಗಿಸುವ ಕೆಲಸಕ್ಕೆ ಅಡಿಕೆ ಏಕೆ? (3)
13. ಭಾರೀ ಲಾಭ ತಂದದ್ದು ಇದೇ ತಾಳವಾದ್ಯ (3)
15. ಆಪದ್ಧನವೆಲ್ಲ ದುರ್ವಿನಿಯೋಗ ಆಗಿದೆ ಎಂಬ ಆರೋಪ ಬಂದಿದೆ (4)
17. ಮಣಭಾರ ಋಣ ಹೊತ್ತಿದ್ದಾನೆ ಆಕೆಯ ಪತಿ (3)
18. ಲಾಡು ಇಲ್ಲವೆಂದೊಡನೆ ಯುದ್ಧವೇ ಆರಂಭ (3)
19. ಗುರುತಿಸುವ ಮೊದಲು ಸುತ್ತುವಂತೆ ಮಾಡು (4)

ಮೇಲಿಂದ ಕೆಳಕ್ಕೆ:

1. ಜಲಾಶಯವನ್ನ ಸುತ್ತಿ ಸಾಕಾಗಿ ಮಲಗಿದ್ದು (3)
2. ದೀಪಾವಳಿಯ ವೇಳೆಗೆ ಸಂಪೂರ್ಣ ಬರಿಗೈ (3)
3. ಕ್ರೂರ ಪಂಥಕ್ಕೆ ಸೇರಿದ್ದು ಮಹಾಪಾಪದ ಕೆಲಸ (3)
5. ಒಳ ಮನೆಗೇಕೆ ಬಂತು ಹುತ್ತ? (3)
7. ಸಸಿಯಲ್ಲೇ ನೇರ ಮಾಡುವುದು ಸುಲಭ (3)
8. ಹೊಲದ ದಾರಿ ಹಿಡಿದಾಗಲೂ ಯೋಚನೆಯ ಅಲೆ ಅಲೆ (3)
9. ಪಂಢರಿನಾಥನ ಸೇವೆಗೆ ಬಂದ ಮಹಾನ್ ವಿದ್ವಾಂಸ (3)
10. ಜಾತಿ ಕಲಹ–ಬಿಡಿಸುವುದು ಕಷ್ಟ (3)
12. ಪರಮಾತ್ಮನ ವಿಚಾರ ಏನೂ ತಿಳಿಯದವ (3)
14. ಬಂಡೆ ಬದಿಯಲ್ಲಿ ನಿಂತು ಬರೀ ಒಣ ಜಂಬ (3)
15. ಅತ್ತಿ ಹಣ್ಣು ತರಲೇಬೇಕೆಂದು ಆಜ್ಞೆ (3)
16. ನಾಲೆಯ ಆಸುಪಾಸಿನಲ್ಲೇ ಶಾಶ್ವತ ವಾಸಿಸು (3)

## ಪದಬಂಧ: 23-12-2010ರ ಉತ್ತರಗಳು

ಎಡದಿಂದ ಬಲಕ್ಕೆ:

1. ಪ್ರಸಾಧನ; 3. ವಿರಸ; 4. ಸುದಿನ; 6. ರತ್ನದಾನ; 7. ವಿಹರಣ; 9. ಗುರುತರ; 12. ನದೀಜಲ; 15. ಪಾಲುದಾರ; 17. ಕಲಾತ್ಮಕ; 18. ಕಶ್ಮಲ; 19. ಶಾಮಕ; 20. ಕಪ್ಪು ಕಲೆ.

ಮೇಲಿಂದ ಕೆಳಕ್ಕೆ:

1. ಪ್ರಸರಣ; 2. ನಸುನಗು; 3. ವಿರಹ; 5. ನಲ್ಲೀತ (ತಲ್ಲೀನ ತಲೆ ಕೆಳಗು); 7. ವಿಲೀನ; 8. ರಜಜ (ಜಠರ ಬುಡಮೇಲು); 10. ರುಮಾಲು; 11. ರಕಾರ; 13. ದೀಪಕ; 14. ಲಕಲಕ; 15. ಪಾಕಶಾಲೆ; 16. ದಾಯಕ.

# ಸಾಗರ ವಿಚಾರ

## ಶಾಂತ ಸಾಗರ – ಏನು ವಿಶೇಷ?

ಶಾಂತ ಸಾಗರ–ಅದು ಪರಾಕಾಷ್ಠೆಗಳ ಆಗರ. ಅದರದು ಭೂಮೇಲ್ಮೈನ ಶೇಕಡ ಮೂವತ್ತೈದರಷ್ಟು ವಿಸ್ತಾರ; ಎಲ್ಲ ಭೂಖಂಡಗಳ ನೆಲದ ಮೊತ್ತಕ್ಕಿಂತಲೂ ಅಧಿಕ ವೈಶಾಲ್ಯ; ದ್ವಿತೀಯ ಸ್ಥಾನದಲ್ಲಿರುವ ಅಟ್ಲಾಂಟಿಕ್ ಸಾಗರದ ಇಮ್ಮಡಿ ವಿಸ್ತೀರ್ಣ. ಇಡೀ ಧರೆಯಲ್ಲಿನ ದ್ರವರೂಪದ ನೀರಿನ ಅರ್ಧಕ್ಕೂ ಹೆಚ್ಚು ಈ ಕಡಲಲ್ಲೇ ಸಂಗ್ರಹ. ಏಷಿಯ, ಆಸ್ಟ್ರೇಲಿಯ, ದಕ್ಷಿಣ ಅಮೆರಿಕ ಮತ್ತು ಉತ್ತರ ಅಮೆರಿಕ (ಭೂಪಟದಲ್ಲಿ ಕ್ರಮವಾಗಿ 1,2,3,4) ಈ ನಾಲ್ಕೂ ಭೂಖಂಡಗಳಿಂದ ಪರಿವೃತವಾಗಿರುವ ಶಾಂತ ಸಾಗರದ ಒಟ್ಟು ವಿಸ್ತಾರ ಒಂದು ನೂರ ಅರವತ್ತೈದು ದಶಲಕ್ಷ ಚದರ ಕಿಲೋ ಮೀಟರ್.

ವಿಪರ್ಯಾಸ ಏನೆಂದರೆ ಈ ಪಾರಾವಾರಕ್ಕೆ 'ಪೆಸಿಫಿಕ್ ಓಶನ್' (ಎಂದರೆ ಶಾಂತ ಸಾಗರ) ಎಂಬ ಹೆಸರು ಅನ್ವರ್ಥವಲ್ಲ. ಇಸವಿ 1520–21 ರಲ್ಲಿ ವಿಖ್ಯಾತ ಸಾಗರಾನ್ವೇಷಕ–ನಾವಿಕ 'ಫರ್ಡಿನೆಂಟ್ ಮ್ಯಾಜೆಲಾನ್' ಈ ಸಾಗರದಲ್ಲಿ ದಕ್ಷಿಣ ಅಮೆರಿಕದ ತುದಿಯಿಂದ ಫಿಲಿಪ್ಪೀನ್ಸ್‌ವರೆಗೆ ಪಯಣಿಸಿದ. ಅವನ ಪಯಣ ಪೂರ್ತಿ ಈ ಕಡಲು ಸೌಮ್ಯವಾಗಿತ್ತು. ಹಾಗಾಗಿ ಮ್ಯಾಜೆಲಾನ್ ಈ ಸಾಗರಕ್ಕೆ ಶಾಂತ ಸಾಗರ ಎಂದೇ ಹೆಸರಿಟ್ಟ. ಆದರೆ ವಾಸ್ತವವಾಗಿ ಈ ಸಾಗರ ಪ್ರಶಾಂತವೇನಲ್ಲ. ಅತ್ಯಧಿಕ ವಿಸ್ತಾರದ ಈ ಕಡಲು ಬೀಸುವ ಗಾಳಿಗೆ ಅತ್ಯಧಿಕ ತೆರೆದು ಕೊಂಡಿರುವುದರಿಂದ ಸಹಜವಾಗಿಯೇ ಇಲ್ಲಿ ಭಾರೀ ಅಲೆಗಳ ಆರ್ಭಟ ಅಲ್ಲೋಲ–ಕಲ್ಲೋಲಗಳು ಅವಿರತ. ತೆರೆದ ಕಡಲಲ್ಲೇ ಇಲ್ಲಿ ಮುವ್ವತ್ನಾಲ್ಕು ಮೀಟರ್ (122 ಅಡಿ) ಎತ್ತರದ ಅಲೆಗಳು ದಾಖಲಾಗಿವೆ.

ಶಾಂತ ಸಾಗರದ ವೈಶಿಷ್ಟ್ಯಗಳು– ವಿಕ್ರಮಗಳು ಹೇರಳ. ಶಾಂತ ಸಾಗರದ ಸರಾಸರಿ ಆಳ 4200 ಮೀಟರ್ (13780 ಅಡಿ) ಬೇರೆ ಯಾವ ಸಾಗರವೂ ಇಷ್ಟು ಆಳ ಇಲ್ಲ. ಧರೆಯ ನೆಲದ ಅತ್ಯಧಿಕ ಆಳದ ಕೊಳ್ಳ 'ಮೇರಿಯಾನಾಸ್ ಟ್ರೆಂಚ್' ಈ ಸಾಗರದಲ್ಲಿದೆ–ಅದರ ಆಳ 36,197 ಅಡಿ! ಹಾಗೆಯೇ ಧರೆಯ ಅತ್ಯಂತ ಎತ್ತರದ–ಹಿಮಾಲಯಕ್ಕಿಂತ ಹೆಚ್ಚು ಉನ್ನತಿಯ–ಪರ್ವತ 'ಮೌನಕೀಯಾ' ಈ ಕಡಲಲ್ಲೇ ಮುಳುಗಿ ನಿಂತಿದೆ! ಅತ್ಯಧಿಕ ಸಂಖ್ಯೆಯ ದ್ವೀಪಗಳಿರುವುದೂ ಈ ಸಾಗರದಲ್ಲೇ. 'ಮೈಕ್ರೋನೇಶಿಯಾ, ಮಲನೇಶಿಯಾ ಮತ್ತು ಪಾಲಿನೇಶಿಯಾ' ಎಂಬ ಮೂರು ಬೃಹತ್ ಸಂಖ್ಯೆಯ ದ್ವೀಪ ಸಮೂಹಗಳೇ ಅಲ್ಲದೆ ಇತರ ಚಿಕ್ಕ ದ್ವೀಪ ಸಮೂಹಗಳೂ ಶಾಂತ ಸಾಗರದಲ್ಲಿ ಬಹಳ ಇವೆ. ಇಲ್ಲಿನ ಸಕಲ ದ್ವೀಪಗಳ ಒಟ್ಟೂ ಸಂಖ್ಯೆ ಹತ್ತಾರು ಸಾವಿರ! ಪೃಥ್ವಿಯ ಬಹುಪಾಲು ಭೂಕಂಪ ತಾಣಗಳು, ಜ್ವಾಲಾಮುಖಿ ನೆಲೆಗಳು ಶಾಂತ ಸಾಗರದ ಅಂಚನ್ನು ಸುತ್ತುವರಿದಿವೆ– 'ಬೆಂಕಿಯ ಉಂಗುರ' ಎಂದೇ ಆ ಪಟ್ಟಿ ಪ್ರಸಿದ್ಧವಾಗಿದೆ.




ಅಷ್ಟೇ ಅಲ್ಲದೆ ಭೂ ಹವೆಯ ಅತಿ ವಿಶಿಷ್ಟ, ಅತಿ ಪ್ರಬಲ, ಅತಿ ಪ್ರಭಾವಯುತ ವಿದ್ಯಮಾನಗಳಾದ 'ಎಲ್‌ನೈನೋ' ಮತ್ತು 'ಲಾ–ನೀನಾ'ಗಳು ಮೈದಳೆಯುವುದು ಕೂಡ ಇದೇ ಸಾಗರದಲ್ಲೇ.

■ ಎನ್.ವಾಸುದೇವ್